ಗುಳೇದಗುಡ್ಡ ನಗರಕ್ಕೆ ನೀರು ಸರಬರಾಜು.

93(181) ಶ್ರೀ ರಾಜಶೇಖರ ವೀರಣ್ಣ ಶೀಲವಂತ (ಗುಳೇದಗುಡ್ಡ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ನಗರಕ್ಕೆ ನೀರು ಸರಬರಾಜು ಮಾಡಲು ಅಳವಡಿಸಿರುವ ಹೊಸ ಪೈಪುಗಳನ್ನು ಖರೀದಿಸುವಾಗ ಗುಣಮಟ್ಟದ ಪರೀಕ್ಷೆ ನಡೆಸಲಾಗಿದೆಯೇ.

ಆ) ಹಾಗಿದ್ದಲ್ಲಿ ಈಗ ಪೈಪುಗಳ ಕೂಡುವಿಕೆಗಳ ಹತ್ತಿರ ರಂದ್ರಗಳು ಬೀಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ ಈ ವರೆಗೂ ಪೈಪುಗಳ ಪರಿವೀಕ್ಷಣೆ ನಡೆಸದಿರಲು ಕಾರಣಗಳೇನು?

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

ಅ) ಹೌದು

ಆ) ಬಂದಿರುತ್ತದೆ.

ಇ) ಕೆಲವು ಕೊಳವೆಗಳಲ್ಲಿ ಮಾತ್ರ ಈ ತರಹ ಆಗಿದ್ದು, ಇವುಗಳನ್ನು ಬದಲಿಸಿ ಬೇರೆ ಕೊಳವೆಗಳನ್ನು ಅಳವಡಿಸಲಾಗಿದೆ. ಈ ಬಗ್ಗೆ ಪರಿವೀಕ್ಷಣೆ ನಡೆಸಿ, ಸೂಕ್ತಕ್ರಮವನ್ನು ಕೈಗೊಳ್ಳಲಾಗಿದೆ.

ವಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟಜಾತಿ ಪಂಗಡದವರಿಗೆ ಭೂ ಒಡೆತನ ಯೋಜನೆ.

94(351) ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ (ಹೊಸ ಬಾಗಲಕೋಟಿ ಜಿಲ್ಲೆ ಸೇರಿ) ಕಳೆದ ಎರಡು ವರ್ಷಗಳಲ್ಲಿ ಪರಿಶಿಷ್ಟ ಜಾತಿ ವರ್ಗಗಳ ಅಭಿವೃದ್ಧಿ ನಿಗಮದ ಭೂ ಒಡೆತನ ಯೋಜನೆ ಅಡಿಯಲ್ಲಿ ಎಷ್ಟು ಎಕರೆ ಜಮೀನು ಖರೀದಿಸಲಾಗಿದೆ (ಮತಕ್ಷೇತ್ರವಾರು ವಿವರ ನೀಡುವುದು)

ಆ) ಗುಳೇದಗುಡ್ಡ ಮತಕ್ಷೇತ್ರದಲ್ಲಿ ಕಡಿಮೆ ಜಮೀನು ಖರೀದಿಸಿರುವುದಕ್ಕೆ ಕಾರಣಗಳೇನು?

ಇ) ಸದರಿ ಯೋಜನೆ ಅಡಿಯಲ್ಲಿ ಹೆಚ್ಚು ಜಮೀನು ಖರೀದಿಸಿ ಪರಿಶಿಷ್ಟರಿಗೆ ಹಂಚಲು ಸರ್ಕಾರದ ನಿಲುವೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಕಳೆದ ಎರಡು ವರ್ಷಗಳಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಭೂ ಒಡೆತನ ಯೋಜನೆಯಡಿಯಲ್ಲಿ ಒಟ್ಟು 1952.36 ಎಕರೆ ಜಮೀನನ್ನು ಖರೀದಿಸಲಾಗಿದೆ. ಮತಕ್ಷೇತ್ರವಾರು ವಿವರ ಲಭ್ಯವಿರುವುದಿಲ್ಲ.